ಕಥೆ

# ವಿಮರ್ಶೆ



■ ಡಾ. ಪ್ರೇಮಲತ ಬಿ.

ಕಲೆ: ರಾಮಕೃಷ್ಣ ಸಿದ್ರಪಾಲ

'ಶುರುವಾಗೋದು ಇನ್ನೂ ತಡವಾಗುತ್ತ?'

'ಇಲ್ಲ ಸರ್... ಸರ್ ಬಂದ ಕೂಡಲೇ ಶುರುಮಾಡ್ತೇವೆ, ಟ್ರಾಫಿಕ್ನಲ್ಲಿ ಸಿಕ್ಕಾಕ್ಕೊಂಡಿದಾರಂತೆ, ವೆಂಕಣ್ಣ ಈಗ ತಾನೇ ಫೋನ್ ಮಾಡಿದ್ದ. ನೀವು ನಾಕ್ನೇವ್ರು ಸಾರ್.'

'ಸರಿ ರಾಘಣ್ಣೋರೆ. ತೊಂದರೆ ಇಲ್ಲ ಬಿಡಿ...'

ಒಂದೂವರೆ ಗಂಟೆಗಳ ಕಾಲ ತಡವಾದ್ರೆ ಯಾರಿಗಾದ್ರೂ ಬೇಜಾರಾಗದೇ ಇರುತ್ತದೇನು? ಏರಿದ್ದ ಉತ್ಸಾಹ, ಉದ್ರೇಕ ಎಲ್ಲ ಕಡಿಮೆ ಆಗಿ ಮನಸ್ಸು ನಿಧಾನಕ್ಕೆ ತಣ್ಣಗಾಗುತ್ತಿತ್ತು. ರಾಘಣ್ಣ ಆಗಾಗ್ಲೇ ಮೂರನೇ ಬಾರಿ ಅಪ್ಡೇಟ್ ಮಾಡಿದ್ದ. ಅವನ ಕನ್ನಡಕದ ಹಿಂದಿದ್ದ ಕಣ್ಣುಗಳು ಬೇಜಾರು, ಸುಸ್ತು, ಸೆಕೆ ಎಲ್ಲ ಸೇರಿ ಲೆನ್ಸ್‌ನ ಮೂಲಕ ಇನ್ನೂ ದಪ್ಪಕ್ಕೆ ಊದಿಕೊಂಡಂತೆ ಕಂಡಿದ್ದವು. ಪಾಪ, ಅವನು ತಾನೇ ಏನು ಮಾಡಲು ಸಾಧ್ಯವಿತ್ತು. ಅವನಂತವರೇ ಇನ್ನೂ ಹದಿನೈದು ಜನ ಆಯೋಜಕರು ಸರ ಬರ ಅಂತ ಓಡಾಡಿಕೊಂಡು, ಬಂದಿದ್ದ ಐನೂರಕ್ಕೂ ಹೆಚ್ಚು ಜನರಲ್ಲಿ ತಡವಾಗುತ್ತಿರುವುದಕ್ಕೆ ಕ್ಷಮಾಪಣೆ ಕೇಳುತ್ತಿದ್ದರು.

'ಬೆಂಗಳೂರಿನ ದರಿದ್ರ ಟ್ರಾಫಿಕ್ ಒಂತರಾ ಬಾಟಲ್ಲಿನ ಕುತ್ತಿಗೆ ಥರಾ, ಹೊರಗಿದ್ದರೆ ಒಳಗೋಗೋಕಾಗಲ್ಲ, ಒಳಗೆ ಹೋದ ನಂತರ ಹೊರಗೆ ಬರೋಕಾಗಲ್ಲ ಥತ್ ಹಿಂಸೆ' ಅಂತ ಜನ ಮಾತಾಡೋಕ್ಕೆ ಶುರುಮಾಡಿದ್ರು.

ಆಗುವುದೆಲ್ಲ ಒಂದರ್ಥಕ್ಕೆ ಒಳ್ಳೆಯದಕ್ಕೇ ಎಂದುಕೊಂಡೆ. ನಾನಾಗಿ ಆಸಕ್ತಿ ತೋರಿ ಬಂದಿದ್ದ ಕಾರ್ಯಕ್ರಮವಿದು. ಬಂದಿದ್ದ ಟ್ಯಾಕ್ಸಿಗೆ ಹಣಕೊಟ್ಟು ಕಳಿಸಿದ್ದೆ. ಬಾಗಿಲಬಳಿ ನಿಂತಿದ್ದ ಸ್ವಾಗತಕಾರರಲ್ಲಿ ಒಬ್ಬ ನನ್ನನ್ನು ಗುರುತಿಸಿ ಸ್ವಾಗತಿಸಿದ್ದ. ನನ್ನಂತವರೇ ಇನ್ನೂ ನಾಲ್ಕು ಜನರು ಕಾಯುತ್ತಿದ್ದರು. ನಾನೂ ಸೇರಿದರೆ ಒಟ್ಟು ಐದು ಜನ. ನನ್ನ ಮನಸ್ಸಿನಲ್ಲಿ ದೃಢ ನಿರ್ಧಾರವಿತ್ತು

ನನ್ನ ಹಳೆಯ ಗೆಳೆಯ ರಾಜೇಶನನ್ನೂ ಬರಲು ಕರೆದಿದ್ದೆ. ಅಷ್ಟಕ್ಕೂ ಅವನನ್ನು ನೋಡಿ ವರ್ಷಗಳೇ ಕಳೆದಿದ್ದವು. ಕಾಲೇಜಿನಲ್ಲಿ ನಾವು ಜೊತೆಯಲ್ಲಿ ಓದಿದ್ದವರು. ರಾಜೇಶ ಮದುವೆಯಾಗಿ ಬೆಂಗಳೂರಲ್ಲೆ ಸಂಸಾರ ಹೂಡಿದ್ದ. ಸಂಸಾರ ಸಮೇತ ಬರುವುದಾಗಿ ಹೇಳಿದ್ದ. ಆದರೆ ಅವನೂ ನಾಪತ್ತೆ. ಒಂದೇ ಊರಲ್ಲಿ ಇದ್ದರೂ ವರ್ಷಕ್ಕೋ, ಎರಡು ವರ್ಷಕ್ಕೋ ಒಮ್ಮೆ ಭೇಟಿಯಾದರೆ ಹೆಚ್ಚು. ಇವತ್ತಿನ ಮುಖ್ಯ ಅತಿಥಿ ಮತ್ತು ರಾಜೇಶ ಒಂದೇ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಕೊಂಡಿರಬೇಕು.

ಮೂಲೆಯಲ್ಲಿ ಕಾಫಿ ಮತ್ತು ಒಂದಷ್ಟು ಖಾರ ಸೇವು ಇಟ್ಟಿದ್ದರು. ಹೋಗಿ ಒಂದು ಸ್ಟ್ರಾಂಗ್ ಕಾಫಿ ತಗೊಂಡು ಕುಡಿಯಲು ಕುಳಿತೆ. ಅಲ್ಲೇ ಹತ್ತಿರದ ಮೂಲೆಯಲ್ಲಿ ಇಂದಿನ ಮುಖ್ಯ ಅತಿಥಿ ಬರೆದಿದ್ದ ಸುಮಾರು ಇಪ್ಪತ್ತು ಪುಸ್ತಕಗಳ ನೂರಾರು ಪ್ರತಿಗಳನ್ನು ಮಾರಾಟಕ್ಕೆ ಇಟ್ಟಿದ್ದರು. ಕಾಫಿಯ ಜೊತೆಯಲ್ಲಿ ಅವು ಬಿಸಿ ಪಕೋಡಗಳಂತೆ ಮಾರಾಟವಾಗುತ್ತಿದ್ದವು. ಕೆಲವರಿಗೆ ಸಮಯ ಕಳೆಯಲು ಇದು ನೆರವಿಗೆ ಬಂದಿತ್ತು. ಕೊಳ್ಳುತ್ತಿದ್ದವರು ಯಾರೂ ಅವನ್ನು ಓದಿಲ್ಲ ಎನ್ನುವುದು ಸ್ಪಷ್ಟವಾಗಿತ್ತು. 'ಯಾವುದು ಒಳ್ಳೇದು ಸರ್... ಇದಾ?' ಅಂತ ಒಬ್ಬರಿಗೊಬ್ಬರು ಮಾತಾಡಿಕೊಂಡು ಕೊಳ್ಳುತ್ತಿದ್ದರು. ಹೊರಗೆ ಹೋದ ಮೇಲೆ ಏನಾದರೂ ಕೊಂಡುಕೊಳ್ಳಲೇಬೇಕು ಎನ್ನುವ ಅಭ್ಯಾಸವಿರಬಹುದು. ಜೊತೆಗೆ ಇದು ಕಥೆಗಾರನನ್ನು ಸನ್ಮಾನಿಸುವ ಕಾರ್ಯಕ್ರಮವಾದ್ದರಿಂದ ಶೇ. 10 ರಿಯಾಯ್ತಿ ಎನ್ನುವ ಆಕರ್ಷಣೆ ಬೇರೆ. ಕೆಲವರು ಪುಸ್ತಕಗಳ ಹೆಸರುಗಳನ್ನು ಹೇಳಲು ಕಲಿತುಕೊಳ್ಳಲು ಕಲಿತುಕೊಳ್ಳುತ್ತಿದ್ದರು. ಕೊಂಡವರೆಲ್ಲ ಓದುತ್ತಾರೋ ಅಥವ ಅವರಿವರು ಕೊಂಡರೆಂದು ಕೊಳ್ಳುತ್ತಿದ್ದಾರೋ ಗೊತ್ತಾಗಲಿಲ್ಲ.

'ಎಲ್ಲ ಚೆನ್ನಾಗಿವೆ ತಕಳ್ಳಿ ಸರ್... ಇವೆಲ್ಲ ಅವ್ರೇ ಬರೆದಿರೋದು' ಅಂತ ಕೌಂಟರಿನ ಹುಡುಗ ಹಲ್ಲು ಗಿಂಜುತ್ತಿದ್ದ. ಅವನು ಖಂಡಿತ ಪುಸ್ತಕ ಓದಿದವನಲ್ಲ. ಒಂದರ್ಥಕ್ಕೆ ಚೆನ್ನಾಗಿ ವ್ಯಾಪಾರ ಧರ್ಮವನ್ನು ನಿಭಾಯಿಸುತ್ತಿದ್ದಾನೆ ಅನ್ನಿಸಿತು. ಬರೆದವರಿಗೆ ಎಲ್ಲ ಮಕ್ಕಳ ಮೇಲೆ ಪ್ರೀತಿ... ಮಾರುವವನಿಗೆ ಗಣಿತದಲ್ಲಿ ಆಸಕ್ತಿ. ಕೊಳ್ಳುವವನಿಗೆ ತನ್ನ ಅಭಿರುಚಿಯನ್ನು ಗುರುತಿಸಿ ತಣಿಸುವ ಶಕ್ತಿಯಿಲ್ಲದಿದ್ದರೆ ಹೆಸರಿನ ನಂಬಿಕೆಯ ಮೇಲೆ ನಡೆಯುವುದಲ್ಲದೆ ಬೇರೆ ದಾರಿಯಿರಲಿಲ್ಲ.

ಅಂತೂ ಅಷ್ಟು ಜನರನ್ನು ಕಲೆ ಹಾಕಿದ್ದಲ್ಲದೆ ಎದ್ದುಹೋಗದಂತೆ ಕೂಡಿಹಾಕುವಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದವರು ಯಶಸ್ವಿಯಾಗಿ ಕೆಲಸ ಮಾಡಿದ್ದರು.

ನಾನೂ ಅಡ್ಡಾಡುತ್ತ ಹೋಗಿ ಅವುಗಳತ್ತ ಕಣ್ಣಾಡಿಸಿದೆ. ಒಬ್ಬ ಬರಹಗಾರನ ಬದುಕಿನ ಬಹುತೇಕ ಸಮಯನ್ನು ಕಬಳಸಿದ ಪುಸ್ತಕಗಳು! ಸಾಲಾಗಿ ಜೋಡಿಸಲ್ಪಟ್ಟಿದ್ದವು. ಹೊಸ ಮುದ್ರಣವಿರಬೇಕು. ಗರಿ ಗರಿಯಾದ ಕಾಗದ, ಆಕರ್ಷಕ ಮುಖಚಿತ್ರಗಳು. ಅರ್ಥಪೂರ್ಣ ಹೆಸರುಗಳು. ಅವನ್ನೆಲ್ಲ ಒಂದೂ ಬಿಡದೆ ಅದೆಷ್ಟು ಆಸ್ಥೆ ಮತ್ತು ಆಸಕ್ತಿಯಿಂದ ಓದಿದ್ದೆ. ಜೊತೆಯಲ್ಲೆ ಕೆಲವು ಮರಿ ಬರಹಗಾರರು ತಮ್ಮ ಪುಸ್ತಕಗಳನ್ನೂ ಇಟ್ಟಿದ್ದರು. ಒಂದನ್ನು ಕೊಳ್ಳಲು ಬಂದವರು ಇನ್ನೊಂದನ್ನೂ ಕೊಳ್ಳಲಿ ಎಂದಿರಬಹುದು.

ಇವತ್ತು ಅತಿಥಿ ಮಹಾಶಯರ ಪುಸ್ತಕಗಳಲ್ಲಿ ಒಂದರ ಬಗ್ಗೆ ವಿಮರ್ಶಾತ್ಮಕವಾಗಿ ಮಾತಾಡುವವನಿದ್ದೆ.

'ಬರಲೇ ಬೇಕು ಸರ್' ಅಂತ ಕರೆದಿದ್ದರು. ಒಪ್ಪಿಕೊಂಡಿದ್ದೆ. ಮೊದಲೆಲ್ಲ ಪ್ರಖರವಾಗಿ ಬರೆದ ಈ ವ್ಯಕ್ತಿ ಇತ್ತೀಚೆಗೆ ತನ್ನದೇ ಚಿಕ್ಕ ಪರಿಮಿತಿಯನ್ನು ಸೃಷ್ಟಿಸಿಕೊಂಡು ಅದನ್ನು ದಾಟದಂತಹ ಪುಸ್ತಕಗಳನ್ನು ಮಾತ್ರವೇ ಬರೆಯುತ್ತಿದ್ದುದು. ಈ ಕಥೆಗಾರನ ಎಲ್ಲ ಪುಸ್ತಕಗಳನ್ನು ಓದಿದ್ದೆ. ಆದರೆ ಕಾಲಾನುಕ್ರಮದಲ್ಲಿ ನನ್ನ ಬಳಿ ಉಳಿದಿರೋದು ಒಂದೆರಡು ಪುಸ್ತಕಗಳಷ್ಟೇ. ಅದರಲ್ಲೇ ಒಂದರ ಬಗ್ಗೆ ಮಾತಾಡಿದರೆ ಆಯ್ತು ಅಂದುಕೊಂಡು ತಯಾರಾಗಿ ಬಂದಿದ್ದೆ. ಅಷ್ಟಕ್ಕೂ ಆ ಭಾನುವಾರ ನಾನು ಮಾಡುತ್ತಿದ್ದುದು ಏನೂ ಇರಲಿಲ್ಲ.

ಅಷ್ಟರಲ್ಲಿ ಮುಖ್ಯದ್ವಾರದ ಬಳಿ ಗದ್ದಲ, ಸಡಗರ